ನಿರಂತರವಾಗಿ ಸಾಕಷ್ಟು ಪ್ರಮಾಣದಲ್ಲಿ ಔಷಧಿಗಳು ಎಲ್ಲಾ ಕಾಲಗಳಲ್ಲೂ ಲಭ್ಯವಾಗುವಂತೆ ಮಾಡುವ ಸಲುವಾಗಿ ಕೇಂದ್ರ ಸರ್ಕಾರವು ಈ ಬೆಲೆ ನಿಯಂತ್ರಣ ಆದೇಶ 1995ನ್ನು ಹೊರಡಿಸಿರುತ್ತದೆ

ಈ) ಸಾರ್ವಜನಿಕರು ನಿಗಧಿತ ಬೆಲೆಗಳಿಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರೆ, ಅಂತಹ ಪ್ರಕರಣಗಳನ್ನು ಔಷಧ ನಿಯಂತ್ರಣ ಇಲಾಖೆಯ ಬೆಲೆ ನಿಯಂತ್ರಣ ಕೋಶಕ್ಕೆ ತಿಳಿಸಿದ್ದಲ್ಲಿ ಅಂತಹವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು

635 (1074) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರೇ ತಿಳಿಸಿದಂತೆ ಜನರಲ್ ಸ್ಟೋರ್‌ನಿಂದ ಸರಬರಾಜಾಗುತ್ತಿರುವ ಔಷಧಿಗಳು ನೂರಕ್ಕೆ ಅರವತ್ತು ಭಾಗ ಅನುಪಯುಕ್ತ ಎಂದು ಹೇಳಲ್ಪಡುತ್ತಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ಅನುಪಯುಕ್ತ ಔಷಧಿಗಳನ್ನು ನೀಡುವುದರಿಂದ ಬಡವರಿಗೆ ಅನ್ಯಾಯವಾಗುವುದಿಲ್ಲವೇ? ಇದರ ಉದ್ದೇಶವಾದರೂ ಏನು?

ಇ) ಇದನ್ನು ನಿಯಂತ್ರಿಸಿ ಆಸ್ಪತ್ರೆಯ ವೈದ್ಯರು ಕೇಳುವ ಔಷಧಿಗಳನ್ನು ಸರಬರಾಜು ಮಾಡಲಾಗುವುದೇ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).

ಅ) ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಿಗೆ ಸರ್ಕಾರ ಅನುದಾನ ನಿಗಧಿಗೊಳಿಸಿದೆ ನಿಗಧಿಗೊಳಿಸಿರುವ ಅನುದಾನಕ್ಕೆ ತಕ್ಕಂತೆ ಸಂಬಂಧಪಟ್ಟ ಆಸ್ಪತ್ರೆಯ ವೈದ್ಯಾಧಿಕಾರಿಗಳು ಅವರ ಆಸ್ಪತ್ರೆಯಲ್ಲಿ ರಚಿತವಾಗಿರುವ ಆಂತರಿಕ ಸಮಿತಿಯ ಶಿಫಾರಸ್ಸಿನಂತೆ ಆಸ್ಪತ್ರೆಯ ಬಳಕೆಗೆ ಅನುಗುಣವಾಗಿ ಔಷಧಿಗಳನ್ನು ಆಯ್ಕೆ ಮಾಡಿ ಬೇಕಾಗಿರುವ ಪ್ರಮಾಣಕ್ಕೆ ಬೇಡಿಕೆಗಳನ್ನು ಸಲ್ಲಿಸುತ್ತಾರೆ

ಈ ರೀತಿ ಆಸ್ಪತ್ರೆಗಳಿಂದ ಪಡೆದ ಬೇಡಿಕೆಗಳನ್ವಯ ಔಷಧಿಗಳನ್ನು ಮೂಲ ಉತ್ಪಾದಕರಿಂದ ದರಗುತ್ತಿಗೆ ದರಗಳಲ್ಲಿ ಖರೀದಿಸಿ, ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಔಷಧಿಗಳನ್ನು ಸಂಬಂಧಪಟ್ಟ ಆಸ್ಪತ್ರೆಗಳಿಗೆ ಪೂರೈಕೆ ಮಾಡಲಾಗುತ್ತಿದೆ

ಆದ್ದರಿಂದ ಆಸ್ಪತ್ರೆಗಳಿಗೆ ಸರಬರಾಜಾಗುತ್ತಿರುವ ಔಷಧಿಗಳು ನೂರಕ್ಕೆ ಅರವತ್ತು ಭಾಗ ಅನುಪಯುಕ್ತ ಎಂದು ಹೇಳುವುದು ನಿಜವಲ್ಲ

ಆ) ಉದ್ಭವಿಸುವುದಿಲ್ಲ

ಇ) ನಿಗಧಿಗೊಳಿಸಿರುವ ಅನುದಾನಕ್ಕೆ ಸಂಬಂಧಪಟ್ಟ ಆಸ್ಪತ್ರೆಯ ವೈದ್ಯಾಧಿಕಾರಿಗಳು ಅವರ ಆಸ್ಪತ್ರೆಯಲ್ಲಿ ರಚಿತವಾಗಿರುವ ಆಂತರಿಕ ಸಮಿತಿಯ ಶಿಫಾರಸ್ಸಿನಂತೆ ಆಸ್ಪತ್ರೆಯ ಬಳಕೆಗೆ ಅನುಗುಣವಾಗಿ ಔಷಧಿಗಳನ್ನು ಆಯ್ಕೆ ಮಾಡಿ ಬೇಕಾಗಿರುವ ಪ್ರಮಾಣಕ್ಕೆ ಬೇಡಿಕೆಗಳನ್ನು ಸಲ್ಲಿಸುತ್ತಿದ್ದು, ಈ ರೀತಿ ಆಸ್ಪತ್ರೆಗಳಿಂದ ಪಡೆದ ಬೇಡಿಕೆಗಳನ್ವಯ ಈ ರೀತಿ ಆಸ್ಪತ್ರೆಗಳಿಂದ ಪಡೆದ ಬೇಡಿಕೆಗಳನ್ವಯ ಔಷಧಿಗಳನ್ನು ಮೂಲ ಉತ್ಪಾದಕರಿಂದ ದರಗುತ್ತಿಗೆ ದರಗಳಲ್ಲಿ ಖರೀದಿಸಿ ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಔಷಧಿಗಳನ್ನು ಸಂಬಂಧಪಟ್ಟ ಆಸ್ಪತ್ರೆಗಳಿಗೆ ಪೂರೈಕೆ ಮಾಡಲಾಗುತ್ತದೆ

ಈ) ಮೇಲೆ ನೀಡಿರುವ ಮಾಹಿತಿಯ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

636 (871) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಒಟ್ಟು ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು? ಸ್ವಂತ ಕಟ್ಟಡಗಳಿರುವ ವಸತಿ ನಿಲಯಗಳೆಷ್ಟು, ಉಳಿದ ವಸತಿ ನಿಲಯಗಳಿಗೆ ಯಾವಾಗ ಸ್ವಂತ ಕಟ್ಟಡಗಳನ್ನು ಒದಗಿಸಲಾಗುವುದು?

ಆ) ರಾಜ್ಯದಲ್ಲಿರುವ ಒಟ್ಟು ವಸತಿ ಶಾಲೆಗಳೆಷ್ಟು? ಅವುಗಳಲ್ಲಿ ಮೊರಾರ್ಜಿ ವಸತಿ ಶಾಲೆಗಳೆಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)?

ಇ) ಜಮಖಂಡಿ ತಾಲ್ಲೂಕಿನಲ್ಲಿ ಅತಿ ಅವಶ್ಯಕವಾಗಿ ಇನ್ನೂ 4 ಕಡೆ ವಸತಿ ಶಾಲೆಗಳ ಬೇಡಿಕೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು?

ಉ) ರಾಜ್ಯದಲ್ಲಿರುವ ಒಟ್ಟು ವಿದ್ಯಾರ್ಥಿನಿಲಯಗಳೆಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಊ) ಜಮಖಂಡಿ ತಾಲ್ಲೂಕುನಲ್ಲಿಯೂ ಸಹ ವಿದ್ಯಾರ್ಥಿನಿಲಯಗಳಿಗೆ ಹೆಚ್ಚಿನ ಬೇಡಿಕೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಹಾಗಿದ್ದಲ್ಲಿ ಯಾವಾಗ ಒದಗಿಸಲಾಗುವುದು?